ಯಾರಿಗೂ ಎದುರಿಗೆ ಮಾತಾಡೋ ತಾಕತ್ತಿರಲಿಲ್ಲ. ಸೊಂಟಕ್ಕಾದ ಪೆಟ್ಟಿಗೆ ಈಗ ಹೆಂಡತಿ ಕಣ್ಣಲ್ಲೂ ಸದರನಾಗಿಬಿಟ್ಟೆನೋ ಅನಿಸಿ ಕುಗ್ಗುವ ಸಮಯದಲ್ಲೇ ದೇವರು ಮತ್ತೆ ಮೇಲಕ್ಕೆತ್ತುವ ಕೈನೀಡಿದ್ದ. ಯಡೂರಬೈಲಿಂದ ವಾಪಸು ಹೊಳೆಹಾದು ಬನವಾಸಿ ಕಡೆ ಬರುತ್ತಿದ್ದ. ಮೂರುಸಂಜೆಯಾಗುತ್ತಾ ಇತ್ತು. ದೋಣಿಹೊಳೆ ಹತ್ತಿರ ಬಾವಾಜಿಮರದ ಕೆಳಗೆ ಇಬ್ಬರು ಸಾಧುಗಳು ಕಲ್ಲು ಹೂಡಿ ಅನ್ನ ಬೇಯಿಸೋ ತಯಾರಿಯಲ್ಲಿದ್ದರು. ಏನೋ ಅನ್ನಿಸಿದ್ದಕ್ಕೆ ಎತ್ತಿನ ಕೊಳ್ಳು ಹರಿದು ಹತ್ತಿರಹೋಗಿ ಮಾತಾಡಿಸಿದ. ಸೇದುತ್ತಿದ್ದ ಚಿಲುಮೆಯನ್ನು ಇವನಿಗೂ ದಾಟಿಸಿ ಮಾತಿಗೆ ತೊಡಗಿದವರೆದುರು ಒಡಲಲ್ಲಿ ಒತ್ತಿಟ್ಟುಕೊಂಡಿದ್ದೆಲ್ಲ ಸರಾಗವಾಗಿ ಬಂದು ಇನ್ನೇನು ಹನಿಗಣ್ಣಾಗುವ ಹೊತ್ತಿನಲ್ಲಿ ನೀಳಗಡ್ಡದವ ಇವನೆದೆ ಮುಟ್ಟಿ ಹೊಳೆಯಲ್ಲಿ ಕಾಲುಮುಖ ತೊಳೆದು ಬರಲು ನಿರ್ದೇಶಿಸಿ ಚೀಲದಿಂದ ಏನೇನೋ ತೆಗೆದು ಮಂಡಲ ಹಾಕತೊಡಗಿದ. ಅರ್ಧತಾಸು ಮಂತ್ರ ಹೇಳುತ್ತ ಧ್ಯಾನ ಮಾಡುತ್ತ ನಡುಗತೊಡಗಿ ಹೂಂಕಾರ ಮಾಡುತ್ತ ಕ್ಷಣ ನಂತರ 'ಹೆದ್ರಬ್ಯಾಡ... ನಿಂಗು ಸಂತಾನ ಆಗತದ...' ಗಂಭೀರ ದನಿಯಲ್ಲಿ ಘೋಷಿಸಿದ್ದು ಯಮ್ಮೆಗುಡ್ಡದ ಹಿಂದೆ ಮಣ್ಣಲ್ಲಿದ್ದ ಪೂರ್ವಜರ ಆಶ್ವಾಸನೆಯಂತೆ ಭಾಸವಾಗಿ ಲವಲವಿಕೆ ತುಂಬಿಹೋಗಿತ್ತು. ಗಾಡಿಯ ಹತ್ತಿರ ಹೋಗಿ ಹುಲ್ಲಡಿಯಲ್ಲಿಟ್ಟ ಸಂಚಿಯಿಂದ ಭತ್ತ ಮಾರಿದ್ದರಲ್ಲಿ ಇಪ್ಪತ್ತೈದು ರೂಪಾಯಿ ತಂದು ಸಾಧುವಿನ ಎದುರಿಟ್ಟು ತನಗೂ ಈ ವಿದ್ಯೆ ಕಲಿಸಿ ಅಂತ ನಮಸ್ಕಾರ ಮಾಡಿಬಿಟ್ಟ. ಏನನಿಸಿತೋ, ಸಾಧು ಅವನಿಗೆ ಸ್ನಾನ ಮಾಡಿಬರಲು ಹೇಳಿ ಅವನನ್ನು ಕುಳ್ಳಿರಿಸಿಕೊಂಡು ತಂತ್ರ ಮತ್ತು ಮಂತ್ರ ಎರಡನ್ನೂ ಉಪದೇಶಿಸಿ 'ನೋಟ' ಹೊಡೆಯುವ ವಿದ್ಯೆಯನ್ನು ಕಲಿಸಿದ. 'ನೋಟ ಅಂದ್ರ ಎದುರಿಗಿದ್ದವ್ರ ಒಳಕ್ಕ ಹೋಗಿ ಸಮಸ್ಯೇನ ನೋಡದು... ಮಂತ್ರ ಮೂಲಕ ಪೀಡೇನ ಓಡಸದು... ಸಾಧನೆ ಮಾಡಬೇಕು, ಅವರ ಪರಿಸ್ಥಿತಿ ಕೆಟ್ಟದ್ದಕ್ಕ ಬಳಸಗಾಬ್ಯಾಡ' ಅಂತ ತಾಕೀತು ಮಾಡಿ ಹರಸಿದ. ಅವರು ಬೇಯಿಸಿದ್ದರಲ್ಲೇ ಸ್ವಲ್ಪ ಉಂಡು ವಾಪಸು ಸೇರುವಾಗ ಒಂದೆರಡು ನಾಯಿಗಳನ್ನು ಬಿಟ್ಟರೆ ಕೇರಿ ಸತ್ತಂತೆ ಕಪ್ಪನೆ ಅಮಾಸೆಯಲ್ಲಿ ಕರಗಿತ್ತು. ಎರಡುದಿನ ನಂತರ ನೋಟ ಹೊಡೆಯೋ ವಿದ್ಯೆ ಪ್ರಯೋಗಿಸಿ ವಗ್ಗಂಟಿ ತಾಮರಿಯ ನಿಲ್ಲದ ಭೇದಿಯನ್ನು, ಗಿಣಿಲಿಂಗ್ಯನ ಹೊಟ್ಟೆನೋವನ್ನೂ ಕಾರಣ ಕಂಡುಹಿಡಿದು ಅವು ವಾಸಿಯಾಗುತ್ತಿದ್ದಂತೆ ಕೇರಿಗೊಬ್ಬ ಮಂತ್ರವೈದ್ಯ ಅವತರಿಸಿದ್ದು ಸುದ್ದಿಯಾಗಿಬಿಟ್ಟಿತು. ದೊಡ್ಡೀರ್ಯನ ಗೌರವ ಎರಡುಪಟ್ಟಾಗಿತ್ತು.

★★★

ಕೇರಿಯ ಹೆಂಗಸರೆಲ್ಲ ಮೇಲ್ಜಾತಿ ಕೇರಿಯವರು ಗದ್ದೆ ತೋಟಗಳ ಕೆಲಸಕ್ಕೆ ಕರೆದರೆ ಹೋಗುತ್ತಿದ್ದರು. ದೊಡ್ಡೀರ್ಯನ ಬಿಟ್ಟರೆ ಗಂಡಸರು ಒಂದಲ್ಲ ಒಂದು ಮನೆಯಲ್ಲಿ ಕಾಯಂ ಕೆಲಸದವರಾಗಿದ್ದರು. ದೊಡ್ಡೀರ್ಯನ ಹೆಂಡತಿಯೂ ನೆಟ್ಟಿಸಮಯ ಗದ್ದೆಕೊಯ್ಲಿನ ಸಮಯದಲ್ಲಿ ಕೂಲಿಗೆ ಹೋಗುತ್ತಿದ್ದಳು. ಕೇರಿಯ ಅನೇಕರಂತೆ ಕುರಿ ಕೋಳಿ ಸಾಕಿದ್ದಳು. ಔಷಧಿಯಾಗಿ ಕುರಿಹಾಲು ಕುಡಿಯುತ್ತಿದ್ದ ದೊಡ್ಡೀರ್ಯ. ಸಿಕ್ಕಾಗ ಕನ್ನೆಹ್ಯಾಟೆ ಮೊಟ್ಟೆಯನ್ನು (ಹೇಟೆ ಮೊದಲ ಬಾರಿ ಇಡುವ ಮೊಟ್ಟೆ) ಸರಾಯಿಯಲ್ಲಿ ಕರಡಿ ಕುಡಿಯುತ್ತಿದ್ದ. ಮಾಳದಿಂದ ಬಿದ್ದಾಗ ಪೆಟ್ಟಾದ್ದು ಹೌದು; ಅದರೆ ತೀರಾ ತಾನೇನು ನಾಲಾಯಕ್ಕಾಗಿಲ್ಲ. ಮೊದಲೆರಡು ವರ್ಷ ತನಗೇನಾಗಿತ್ತು? ಇವಳ ಗರ್ಭದಲ್ಲೇ ದೋಷವಿರಬಹುದು ಅನ್ನುವ ಜಿಜ್ಞಾಸೆ ಸುರುವಾಗುತ್ತಿತ್ತು. ಅವತ್ತು ಸ್ವಪ್ನದಲ್ಲಿ ತಾನು ಬಿದ್ದದ್ದು, ಕಂಬ ತಿಕ್ಕುತ್ತಿದ್ದ ಹೋರಿಮಿಕ ಓಡಿದ್ದು ಕಂಡಿತ್ತು. ಆದರೆ ಅದು ಸ್ಮಶಾನದತ್ತ ಮಾಯವಾಗಿತ್ತು. ಕಪ್ಪಗೆ ಸಾಲಾಗಿ ಬಂದವರು ರೂಪ ಬದಲಿಸಿರಬಹುದು; ತಾನಲ್ಲಿ ಸರಸದಲ್ಲಿರುವುದು ಅವರಿಗೆ ಉರಿಯಾಗಿರಬಹುದು; ತನ್ನ ಆ ಶಕ್ತಿಯನ್ನೇ ಕಿತ್ತೊಯ್ದಿರಬಹುದು ಅನ್ನುವ ಅಳುಕಿಗೊಳಗಾಗುತ್ತಿದ್ದ. ಬೆಂಬಲವಾಗಿ ಅವನ ಅಜ್ಜ ಹೇಳುತ್ತಿದ್ದ ಕತೆ ನೆನಪಾಗುತ್ತಿತ್ತು:

ಅವನಜ್ಜ ದೂಮ್ಯನಿಗೆ ಮೀನು ಅಂದರೆ ಪ್ರಾಣ. ಸಮಯ ಸಿಕ್ಕರೆ ಸಾಕು ಗಾಳದೊಂದಿಗೆ ಕೆರೆ